(SRI T. MARIAPPA)

am grateful for that. We will positively bear in mind whatever Hon'ble Members have said. It is not a question of simply forgetting it. I therefore, thank all for their very valuable suggestions.

MR. SPEAKER.—The question is:

"That the Mysore Appropriation (No. 2) Bill, 1958, be taken into consideration."

The motion was adopted.

MR. SPEAKER.—Clauses. The question is:

"That Clauses 2 and 3 stand part of the Bill"

The motion was adopted.

Clauses 2 and 3 were added to the Bill.

MR. SPEAKER.—Schedule. The question is:

"That the Schedule stand part of the Bill."

The motion was adopted.

The Schedule was added to the Bill.

MR. SPEAKER.—Clause 1 and the Preamble. The question is:

"That Clause 1 and the Preamble stand part of the Bill"

The motion was adopted.

Clause 1 and the Preamble were added to the Bill.

Motion to pass.

SRI T. MARIAPPA.—Sir, I move:

"That the Mysore Appropriation (No. 2) Bill, 1958 be passed."

MR. SPEAKER.—The question is:

"That the Mysore Appropriation (No. 2) Bill, 1958 be passed."

The motion was adopted.

MR. SPEAKER.—Before we go to the other item, I would like to inform the House that on the Budget, including the general debate and the discussion on Demands, 319 members have taken part. On general debate on the Budget 89 members have taken part; on the Demands 230 members have taken part. This does not include the Ministers and the Deputy Ministers. If they are also included, it would come to 360 speeches. It is a good record.

SRI J. B. MALLARADHYA.—We always set up records Sir.

MR. SPEAKER.—Next item.

BOMBAY LOCAL BOARDS (MYSORE AMENDMENT) BILL, 1958.

Motion to consider.

SRI R. CHENNIGARAMAIAH (Minister for Local Self-Government).—Sir, I move:

"That the Bombay Local Boards (Mysore Amendment) Bill, 1958, as passed by the Legislative Council, be taken into consideration."

MR. SPEAKER.—Motion moved:

"That the Bombay Local Boards (Mysore Amendment) Bill, 1958, as passed by the Legislative Council, be taken into consideration."

*SRI R. CHENNIGARAMAIAH.—Sir, this is a simple piece of legislation which has been passed by the Legislative Council. As the Bill is self-explanatory, I need not go into the details of the Bill. Hon'ble Members are aware that the draft Bill for introducing uniform law has already been published. If that had not been published, probably, there would have been some scope for discussion on this Bill. That Bill will be introduced as early as possible and I am sure Hon'ble Members are already in possession of the draft Bill. The term of the District Boards in Belgaum, Dharwar, Bijapur and Karwar will expire on 31st May 1958. It would not be possible for the introduction of

uniform law within that time. We do require some more time, because after the Bill is introduced and passed, we will have to delimit the constituencies, hold elections to Panchayats and District Boards. All this will take at least one year. Therefore, it has necessitated the Government to extend the period of these District Boards up to 31st May 1959. I hope, Hon'ble Members, having understood these implications, will give their wholehearted support to this Bill.

*ಶ್ರೀ ವಿ. ಶ್ರೀನಿವಾಸಶೆಟ್ಟಿ (ಕುಂದಾಪುರ).—ಸ್ವಾಮಿ, ಜಿಲ್ಲಾ ಬೋರ್ಡಿಗೆ ಸಂಬಂಧಪಟ್ಟ ಮಸೂದೆಯನ್ನು ಸಭೆಯಮುಂದೆ ಬೇಗನೆ ತರುತ್ತೇವೆಂದು ಹೇಳುತ್ತಲೇ ಬಂದಿದ್ದಾರೆ. ಅದಕ್ಕೆ ಬದಲಾಗಿ ಈ ತಿದ್ದುಪಡಿ ಮಸೂದೆ ನಮ್ಮ ಎದುರಿಗೆ ಬಂದಿದೆ. ಆ ಮಸೂದೆಯನ್ನು ಯಾವಾಗ ತರುತ್ತಾರೆ ಎನ್ನುವ ಪ್ರಸ್ತಾಪವೇ ಈಗ ಕಾಣುವುದಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಯಾವುದು ?

ಶ್ರೀ ವಿ. ಶ್ರೀನಿವಾಸಶೆಟ್ಟಿ.—ನೀವು ಹಿಂದಿನಿಂದಲೂ ತರುತ್ತೇವೆ ಎಂದು ಹೇಳಿದ ಮಸೂದೆ. ಅದರ ವಿಷಯವಾಗಿ ಯಾವ ಪ್ರಸ್ತಾಪವೂ ಕಾಣುವುದಿಲ್ಲ. ಈಗ ನೋಡುವಾಗ ಈ ತಿದ್ದುಪಡಿ-ಮಸೂದೆ ಒಂದು ಅಪಶಕುನದಂತೆ ಕಾಣುತ್ತದೆ. ಕಳೆದ ಒಂದು ವರ್ಷದಿಂದ ಜಿಲ್ಲಾ ಬೋರ್ಡಿನ ಮಸೂದೆಯನ್ನು ಸರ್ಕಾರದವರು ಖಂಡಿತವಾಗಿ ಆದಷ್ಟು ಜಾಗ್ರತೆ ಸಭೆಯ ಮುಂದೆ ತರುತ್ತೇವೆಂದು ಹೇಳಿಕೊಂಡು ಬರುತ್ತಲೇ ಇದ್ದಾರೆ. ಬಹಳ ಶ್ರಮಪಟ್ಟು ಈ ತಿದ್ದುಪಡಿ ಮಸೂದೆಯನ್ನು ತಯಾರುಮಾಡಿ ನಮ್ಮ ಎದುರಿಗೆ ಏನೋ ಮ್ಯಾಜಿಕ್‌ಮಾಡಿ ಇಟ್ಟಹಾಗೆ ಕಾಣುತ್ತದೆ. ಇವತ್ತು ಬರುತ್ತದೆ, ನಾಳೆ ಬರುತ್ತದೆ ಎಂದು ಹೇಳುವುದೆಲ್ಲ ಮಾಯವಾಗಿದೆ. ಈ ಮಸೂದೆ ನಿಜವಾಗಿ ಈ ಸಭೆಯಮುಂದೆ ಚರ್ಚೆಗೆ ಬಂದುದು ನ ಪು ಗ ಂ ತೂ ಸಂಶಯವನ್ನುಂಟುಮಾಡಿದೆ.

5 P.M.

ಈಗ ಅಂತೂ ಈ ಬಿಲ್ಲು ಏನೋ ಬಂದಿದೆ. ಒಂದು ವರ್ಷ ಅವಧಿ ಏತಕ್ಕಾಗಿ ಬೇಕು ? ಇದೇ ಅಧಿವೇಶನದಲ್ಲಿ ಆ ವಿಸ್ತೃತ ಬಿಲ್ಲು ಮಂಡಿಸಿ, ಪಾಸುಮಾಡಿ, ಕಾನೂನು ಆಗುವುದಾದರೆ ಇನ್ನೊಂದು ವರ್ಷ ಅವಧಿ ಏತಕ್ಕೆ ಬೇಕು ?—ಪ್ರತಿಯೊಂದು ಸಲ ಒಂದೊಂದು ವರ್ಷ ಅವಧಿ ಕೇಳುತ್ತಿದ್ದೀರಿ. ಹೀಗೆ ಮೈಸೂರಿನಲ್ಲಿ ಏಳು-ಎಂಟು ವರ್ಷವಾಯಿತು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕೈದು ವರ್ಷವಾಯಿತು. ಬೊಂಬಾಯಿ ಕರ್ನಾಟಕದ ಪ್ರದೇಶದಲ್ಲಿ ಅವಧಿಯನ್ನು ಹೆಚ್ಚಿಸಲಾಯಿತು. ಇದರಿಂದ ಒಂದು ಸಂಶಯ ಬರುತ್ತದೆ. ಚುನಾವಣೆಗಳನ್ನು ಮುಂದಕ್ಕೆ ಹಾಕುತ್ತಿದ್ದೀರಿ. ಮೂರು-ನಾಲ್ಕು ತಿಂಗಳುಗಳಲ್ಲಿ ಕಾನೂನು ಪಾಸ ಮಾಡಿಕೊಂಡು ಚುನಾವಣೆ ಮಾಡಬಹುದು. ಆದುದರಿಂದ ಆರು ತಿಂಗಳ ಅವಧಿಯನ್ನು ಕೇಳಬಹುದು ಡಿಸೆಂಬರಿನೊಳಗಾಗಿ ಚುನಾವಣೆ ಮಾಡಿದರೆ ಸಾಕು. ಆದುದರಿಂದ ಒಂದು ವರ್ಷ ಅವಧಿ ಕೇಳಿಕೊಳ್ಳುವ ಇರಾದೆ ಒಳ್ಳೆಯದಲ್ಲ. ಅದಕ್ಕಾಗಿ ಈ ಮಸೂದೆಗೆ ನಾವು ಒಪ್ಪಿಸಿ ಕೊಡುವಧಿಲ್ಲ.

*ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಈ ಜೀವದಾನ ಮಾಡುವ ಪದ್ಧತಿಯನ್ನು ವಿರೋಧ ಮಾಡುತ್ತೇನೆ. ಲೋಕಲ್ ಬೋರ್ಡುಗಳಿಗೆ ಜೀವದಾನ ಪ್ರಾಪ್ತವಾಗುವ ತಿದ್ದುಪಡಿ ಮಸೂದೆಯನ್ನು ಮೊದಲನೆಯ ಸಾರಿ ಈ ಸಭೆಯ ಮುಂದೆ ತಂದಾಗ್ಲೆ ಇದೇ ಕೊನೆಯ ಸಲ ಎಂದು ಹೇಳಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಲೋಕಲ್ ಬೋರ್ಡ್‌ಗೆ ಜೀವದಾನ ಮಾಡುವ ತಿದ್ದುಪಡಿ ಮಸೂದೆಯನ್ನು ತಂದರು, ಒಂದು ರೀತಿಯಿಂದ ಎಡಗೈ ತೆಗೆದು ಬಲಗೈ ಇಟ್ಟ ಹಾಗೆ, ಸಂತೆ ಮಾಳದಲ್ಲಿ ಔಷಧ ಮಾರಿದ ಹಾಗೆ, ಸರಕಾರ ಹಾವಾಡಿಗರ ಆಟ ಆಡಿದ ಹಾಗೆ ಆಗಿದೆ. ಶ್ರೀ ಚೆನ್ನಿಗರಾಮಯ್ಯನವರು ಲೋಕಲ್ ಬೋರ್ಡುಗಳಿಗೆ ನಾಮಿನೇಷನ್ ಮಾಡುವುದಕ್ಕೆ ಅವರಿಗೆ autonomous ಅಧಿಕಾರ ಕೊಟ್ಟು ಬಿಡಬೇಕು ಎಂದು ನಾನು ಶ್ರೀ ನಿಜಲಿಂಗಪ್ಪನವರಿಗೆ ವಿನಂತಿಮಾಡಿಕೊಳ್ಳುತ್ತೇನೆ. ಹಿಂದಕ್ಕೆ ಅಡ್‌ವೈಜರೀ ಕಮಿಟಿ ಮಾಡಿದ್ದಾಗ್ಲೆ ಯಾರನ್ನಾದರೂ ಕೇಳಿ ಮಾಡಿದರೆ ? ಈ ಸಭೆಯಲ್ಲಿ ಕೈಎತ್ತು ಅಂದರೆ ಕೈಎತ್ತಿ ಮಸೂದೆ ಪಾಸು ಮಾಡಿಬಿಡುತ್ತಾರೆ. ಆಮೇಲೆ ಅದೇ ಸದಸ್ಯರು ಹೊರಗಡೆ ಬಂದು ಬಹಳ ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ಅವರಿಗೆ ಎಂಥಾ ಕಷ್ಟ ಬಂದಿದೆ ? ಅವರಿಗೆ ಅಷ್ಟು ಧೈರ್ಯವಿಲ್ಲ. ನಿಮ್ಮ ಪಕ್ಷದಲ್ಲಿ ಒಳ್ಳೆಯ ಧೈರ್ಯಶಾಲಿಗಳಾದ ಭೀಷ್ಮ, ದ್ರೋಣ, ಕೃಪ, ಅಶ್ವತ್ಥಾಮ ಅಂಥವರು ಇದ್ದರೂ ಕುರುಕ್ಷೇತ್ರದಲ್ಲಿ ಆಯುಧ ಕೆಳಗೆ ಇಟ್ಟುಬಿಟ್ಟಿದ್ದಾರೆ ಎಂಬ ಹಾಗೆ ಆಗಿದೆ. ಆದುದರಿಂದ ಈ ರೀತಿ ತಿದ್ದುಪಡಿ ಮಸೂದೆ ತಂದು ಜೀವದಾನ ಮಾಡುವುದು ಬೇಡ ಎಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಧಿಕಾರಿಗಳಿಗೆ ಜೀವದಾನ ಮಾಡುತ್ತೀರಿ, ಕಮಿಟಿಗಳಿಗೆ ಜೀವದಾನ ಮಾಡುತ್ತೀರಿ, ಡಿಸ್ಮಿಸ್ಕ್ ಬೋರ್ಡುಗಳಿಗೆ ಜೀವದಾನ ಮಾಡುತ್ತೀರಿ. ಹಾಗಾದರೆ ನಿಮಗೂ ಏಕೆ ಜೀವದಾನ ಮಾಡಬಾರದು ? ಈ ರೀತಿ ಜೀವದಾನ ಮಾಡುವುದು ಪ್ರಜಾಪ್ರಭುತ್ವದಲ್ಲಿ ಅರ್ಥವಾಗುವುದಿಲ್ಲ ಎಂದು ಖಂಡಿತವಾಗಿ, ನಿಷ್ಪಷ್ಟವಾಗಿ, ಋಚಿತವಾಗಿ, ಹೇಳಬೇಕಾಗಿದೆ. ಇದಕ್ಕಾಗಿ ಬಹಳ ವ್ಯಸನವಾಗುತ್ತದೆ. ಗುಡಾರದಲ್ಲಿ ಕುಳಿತು ಹಗ್ಗಕೊಯಿದ ಹಾಗೆ ಆಗಿದೆ. ವಾಮನ ಅವತಾರವಾಗಿ ಬಲಚಕ್ರವರ್ತಿಯ ತಲೆಯಮೇಲೆ ಪಾದ ಇಟ್ಟಹಾಗೆ ನಿಮ್ಮ ತಲೆಯಮೇಲೆ ಕಾಲು ಇಟ್ಟು ಬಿಡುವ ಗತಿ ಆದಂತೆ ಆಗಿದೆ. ಏತಕ್ಕಾಗಿ ಜೀವದಾನ ಬೇಕು ? ವಿಶಾಲ ಮೈಸೂರು ರಾಜ್ಯಕ್ಕೆ ಒಂದು ಯುನಿಫಾರ್ಮ್ ಕಾನೂನು ಬರುವುದು ಇದೆ. ಅದನ್ನು ಪಾಸ್ ಮಾಡಿಕೊಂಡು ಕಾನೂನು ಮಾಡಿ ಚುನಾವಣೆಗಳನ್ನು ತೀವ್ರ ನಡೆಸಬೇಕು. ಹೀಗೆ ಮಾಡುವುದರಲ್ಲಿ ಸರ್ಕಾರಕ್ಕೆ ಏನು ತೊಂದರೆ ಇದೆ ? ನಿನು ಕಷ್ಟವಿದೆ ? ಈ ರೀತಿ ಚುನಾವಣೆ ನಡೆಸದೆಹೋದರೆ ನಿಮ್ಮ ಬುಡ ಅಲ್ಲಾಡುತ್ತದೆ. ಇಂಥ ಪರಿಸ್ಥಿತಿ ನಿಮಗೆ ಮುಂದೆ ಬಂದೇ ಬರುತ್ತದೆ ಎಂದು ನಾನು ಹೇಳುತ್ತೇನೆ. ಸರ್ಕಾರಕ್ಕೆ ಭೂಸುಧಾರಣೆ ಜಾರಿಗೆ ತರಲು ಧೈರ್ಯವಿಲ್ಲ, ಜಿಲ್ಲಾ ಬೋರ್ಡುಗಳಿಗೆ ಚುನಾವಣೆ ನಡೆಸಲು ಧೈರ್ಯವಿಲ್ಲ, ಇದರಿಂದ ನೀವು ಮಾಡುತ್ತಿರುವ ಕೆಲಸ, ನಡವಳಿಕೆ ನೋಡಿ ಎಲ್ಲರಿಗೆ ಭೇಜಾರಾಗುತ್ತಿದೆ. ಸರ್ಕಾರ ನಿಜವಾಗಿ ಮನಸ್ಸು ಮಾಡಿದ್ದರೆ ಈ ಮೊದಲೇ ಎಲ್ಲಾ ಪ್ರದೇಶಕ್ಕೂ ಒಂದೇ ರೀತಿಯ ಕಾನೂನು ಇರುವ ಹಾಗೆ ಎಲ್ಲ ಕಾನೂನು ಸಮನ್ವಯ ಮಾಡತಕ್ಕ ಮಸೂದೆಯನ್ನು ತರಬಹುದಾಗಿತ್ತು. 1956ನೆಯ ನವಂಬರಿನಿಂದ ಅಧಿಕಾರದಲ್ಲಿ ನೀವು ಇದ್ದೀರಿ. ಅದಕ್ಕೂ ಮೊದಲು ಸಹ ಮಂತ್ರಿಮಂಡಳದಲ್ಲಿದ್ದು ಅನುಭವ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಪಡೆದಿದ್ದೀರಿ. ಶ್ರೀ ಚೆನ್ನಿಗರಾಮಯ್ಯನವರು ಅನುಭವಿಗಳು ಸ್ವಚ್ಛ ಮನಸ್ಸಿನವರು ಆಗಿದ್ದಾರೆ. ಹಾಗಾದರೆ ಈ ಮಂತ್ರಿಮಂಡಳ ಅಧಿಕಾರಕ್ಕೆ ಬಂದಕೂಡಲೇ ಒಂದು ಬಿಲ್ಲನ್ನು ಡ್ರಾಫ್ಟ್ ಮಾಡಿ, ಈ ಸಭೆಯಲ್ಲಿ ಪಾಸ್ ಮಾಡಲು ಅದನ್ನು ಮಂಡಿಸಿ, ಸೆಲೆಕ್ಟ್ ಕಮಿಟಿಯ ರಿಪೋರ್ಟ್ ತರಿಸಿಕೊಂಡು ಪಾಸ್ ಮಾಡಿ; ಕಾನೂನು ಆದಮೇಲೆ ಚುನಾವಣೆ ನಡೆಸಬಹುದಾಗಿತ್ತು. ಆದರೆ ಹಾಗೆ ಮಾಡಲು ಮನಸ್ಸು ಬಾಡಲಿಲ್ಲ. ಅಂಥ ಇಕ್ಕಟ್ಟಿನ ಪರಿಸ್ಥಿತಿ ಏನು ಬಂದಿದೆ? ವಿಶಾಲ ಮೈಸೂರು ರಾಜ್ಯ ಆದಮೇಲೆ ನಮ್ಮ ಮನಸ್ಸೂ ಸಹ ವಿಶಾಲವಾಗಬೇಕು. ಕರ್ನಾಟಕ ಮಾತೆಯ ಸೇವೆಗಾಗಿ ಎಲ್ಲವನ್ನೂ ಮಾಡಲೇಬೇಕು. ಆದರೆ ಈ ಕಾನೂನು ಪಾಸ್ ಮಾಡಲು ಆಗಲಿಲ್ಲ. ಆದುದರಿಂದ ಈಗ ತಂದಿರುವ ಈ ತಿದ್ದುಪಡಿ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಬೇಕು. ಪ್ರಜಾಪ್ರಭುತ್ವದಲ್ಲಿ ಈ ರೀತಿ ಜೀವದಾನ ಮಾಡುತ್ತ ಹೋಗುವುದು ಸರ್ಕಾರದ ಉಳುಮೆಯಲ್ಲ. ಕೇಂದ್ರ ಸರ್ಕಾರದಲ್ಲಿಯೂ ಕೂಡ ಒಂದು ಬಿಲ್ಲು ತರಬೇಕಾದರೆ ಎಷ್ಟು ಸೂಕ್ಷ್ಮವಾಗಿ ಯೋಚನೆ ಮಾಡುತ್ತಾರೋ ಹಾಗೆ ನಮ್ಮ ರಾಜ್ಯ ಸರ್ಕಾರವೂ ಮಾಡಬೇಕು. ಹೀಗೆ ಅವಸರ ಅವಸರವಾಗಿ ಒಂದು ತಿದ್ದುಪಡಿ ಮಸೂದೆಯನ್ನು ತಂದು ಪಾಸ್ ಮಾಡಿಸಿಕೊಳ್ಳುವ ಪದ್ಧತಿಯು ಸರಿಯಲ್ಲ.

ಉರ್ದುವಿನಲ್ಲಿ ಒಂದು ಗಾದೆ ಇದೆ, ಜಲ್ದೀ ಕ ಕಾಂ, ಶೈತಾಂ ಕ ಕಾಂ ಎಂದು. ಈ ರೀತಿ ಅವಸರ ಅವಸರವಾಗಿ ಮಾಡುವುದು ಸಮಾಜಕ್ಕೆ ದ್ರೋಹ ಮಾಡಿದಂತೆ, ನಿಮ್ಮ ಮನಸ್ಸಿಗೆ ಅನ್ಯಾಯ ಮಾಡಿದಂತೆ, ಯಾವ ಪ್ರಜಾಪ್ರಭುತ್ವದ ಪ್ರಕಾರ ರಾಜ್ಯಭಾರ ಮಾಡುತ್ತೀರಿ ಅದಕ್ಕೆ ದ್ರೋಹ ಮಾಡಿದಂತಾಗುತ್ತದೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅದಕ್ಕೇ ನಾವು ಜಾಗ್ರತೆ ಮಾಡಬಾರದು ಎಂದು ಇದ್ದೀವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಮೆಂಡಿಂಗ್ ಬಿಲ್ ಹಿಂದೆ ಏನಿತ್ತೋ ಅದನ್ನೇ ಇವತ್ತು ಅವಸರ ಅವಸರವಾಗಿ ತಂದಿರುವುದು ಒಳ್ಳೆಯದಲ್ಲ. ಕಾಂಪ್ರಹೆನ್ಸೀವ್ ಬಿಲ್ ಬರೆದು ಇಟ್ಟಿದ್ದೀರಿ, ಅದನ್ನು ಈ ಸಭೆಯಲ್ಲಿ ಚರ್ಚೆ ಮಾಡುತ್ತೀರೋ ಇಲ್ಲವೋ ಗೊತ್ತಿಲ್ಲ. ಈಗ ಕವಿಯಲ್ಲಿ ಬಿದ್ದಿರುವಂತೆ ಈ ಸಭೆಯಲ್ಲೇ ಚರ್ಚೆಗೆ ಬರುತ್ತದೆ ಎಂದು ಕೇಳಿದ್ದೆವು. ನನಗಂತೂ ಧೈರ್ಯ ಸಾಲದು, ನೀವು ಏಕ ಮನಸ್ಸಿನಿಂದ ಮಾಡಿಲ್ಲ. ಪಂಡಿತ ನೆಹರು, ಮಹಾತ್ಮ ಗಾಂಧಿ ಅವರು ಏನು ಹೇಳಿದ್ದಾರೆ ಎಂದರೆ ಎಲ್ಲಿ ಸ್ಥಳೀಯ ಸಂಸ್ಥೆಗಳು ಸರಿಯಾಗಿ, ಸುಭದ್ರವಾದಂಥ ತಳಹದಿಯಮೇಲೆ ಕೆಲಸ ಮಾಡುತ್ತವೆ ಅಲ್ಲಿ ಪ್ರಜಾಪ್ರಭುತ್ವ ಕೆಲಸ ಮಾಡುತ್ತದೆ ಎಂದು. ಕಮ್ಯೂನಿಸ್ಟು ನಂಬೂದ್ರಿಪಾದ್ ಅವರು ಮೊನ್ನೆ ಹೇಳಿದ್ದಾರೆ, ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ಇರಬೇಕು, ಆಗಲೇ ನಿಜವಾಗಿಯೂ ಪ್ರಜಾಪ್ರಭುತ್ವ ಕೆಲಸ ಮಾಡುವುದಕ್ಕೆ ಸಾಧ್ಯ ಎಂದು. ಇಂಥಾ ಪ್ರಜಾಪ್ರಭುತ್ವವನ್ನು ನೀವು ನಿಜವಾಗಿಯೂ ಫಲಪ್ರದವಾಗಿ ಮಾಡಬೇಕಾದರೆ ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ ನಡೆಯದೆ ಇರುವ ರೀತಿಯಲ್ಲಿ ನೋಡಿಕೊಳ್ಳಬೇಕು. ಈಗ ನೀವು ಹಾಗೆ ಮಾಡಿಲ್ಲ, ಅಂಥ ಯೋಚನೆ ಇದ್ದಿದ್ದರೆ ಈ ಅಮೆಂಡಿಂಗ್ ಬಿಲ್ಲನ್ನು ತರುತ್ತಾ ಇರಲಿಲ್ಲ. ನಿಮಗೆ ಇದನ್ನು ಬಹಳ ಕಠಿಣವಾಗಿ ಹೇಳುತ್ತೇನೆ ಎಂದು ತಾವು ತಿಳಿದುಕೊಳ್ಳಬಾರದು. ನಿಮ್ಮ ಕಾಲದಲ್ಲಿ ಆದರೂ ಇದನ್ನು ತಂದು, ನಿಮ್ಮ ಕಾಲದಲ್ಲಿ ಇದಕ್ಕೆ ನಷ ಬಿದ್ದು, ನಾನು ನಡೆವನಾಗಿದ್ದಾಗ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಿತು ಬಿಟ್ಟಾ ಬೋರ್ಡಿನಲ್ಲಿ ನನ್ನವರಾದ 12. ಅಥವಾ 14 ಜನರಿಗೆ ಪಟ್ಟ ಕಟ್ಟಿದ್ದೀನೆ ಎಂದು ನೀವು ಹೆಸರು ತೆಗೆದುಕೊಂಡರೆ ನಿಜವಾಗಿಯೂ ನಿಮ್ಮ ಹೆಸರಿಗೆ ತಕ್ಕದ್ದು. ನೀವು ನಮ್ಮ ಡಿಸ್ಟ್ರಿಕ್ಟಿನಲ್ಲಿ ಹುಟ್ಟಿ, ಬೆಳೆದು ರಾಜಕೀಯ ಮಾಡಿದ್ದಕ್ಕೆ ಸರಿ. ಇಲ್ಲದೇ ಹೋದರೆ ಏನೋ ಚನ್ನಿಗರಾಮಯ್ಯನವರು ಮಂತ್ರಿಗಳಾಗಿ ಬಂದರು ಹೋದರು, ಐದುವರ್ಷ ಮಂತ್ರಿಗಳಾಗಿದ್ದರೂ ಏನೂ ಮಾಡಲಿಲ್ಲ ಎಂದು ಹೇಳುವ ಹಾಗೆ ಆಗುತ್ತದೆ. ನಿಮ್ಮ ಕಾಲದಲ್ಲಿ ಹಳೆಯ ಮೈಸೂರು ಮುನಿಸಿಪಲ್ ಆಕ್ಟಿಗೆ ಹೇಗೆ ಅಮೆಂಡ್‌ಮೆಂಟ್ ಮಾಡಿದರೋ ಹಾಗೆಯೇ ವಿಶಾಲ ಮೈಸೂರಿನಲ್ಲೂ ಧೈರ್ಯವಾಗಿ ಒಂದು ಹೊಸ ಬಿಲ್ಲನ್ನು ತಂದು ಏನಾಗುತ್ತದೆಯೋ ನೋಡೋಣ ಎಂದು ಚರ್ಚೆಗೆ ಇಟ್ಟು ಯೂನಿಫಾರಂ ರೆಜಿಸ್ಟ್ರೇಷನ್ ಮಾಡಿದ್ದರೆ ನಿಮಗೆ ತಹಬಾಸ್‌ಗಿರಿ ಕೊಡುತ್ತಿದ್ದೆ. ಇವತ್ತು ನಿಮಗೆ ತಹಬಾಸ್‌ಗಿರಿ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ನೀವು ಹೋಗಿರತಕ್ಕ ಮಾರ್ಗ ಮಾಡುತ್ತಾ ಇರುವ ಕೆಲಸ ನೀವು ಯೋಚನೆ ಮಾಡುತ್ತಾ ಇರುವ ಬದುಕು ಎಲ್ಲಾ ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಾಗಿದೆ. ನನಗಾದರೂ ಅನಿಸುತ್ತದೆ, ಕೇಂದ್ರದವರು ಏಕೆ ನಿಮ್ಮನ್ನು watch ಮಾಡುತ್ತಿಲ್ಲ ಎಂದು. ಏನಯದಿಂದ ಪ್ರಾರ್ಥನೆಮಾಡಿಕೊಳ್ಳುತ್ತೇನೆ, ಇಂಥದನ್ನು ಮಾತ್ರ ಮಾಡಬೇಡಿ. ಮೊನ್ನೆ ಸೌತ್ ಕೆನರಾ ವಿಷಯ ಹೇಳಿದಿರಿ. ಬಾಯಿಗೆ ಬೀಗ ಹಾಕಿದಿರಿ. ಮತ್ತೆ ಅದೇ ಬಂತು, ಗಗ್ಗಯ್ಯ ಹೋದ್ಯಾ ಎಂದರೆ ಅದೇ ಗವಾಕ್ಷೀಲಿ ಬಂದೇ ಅನ್ನುವ ಹಾಗೆ. ಒಂದುವೇಳೆ ನೀವು ಈಗ ಡ್ರಾಪ್ಟ್ ಬಿಲ್ಲನ್ನು ಇಂಟ್ರೊಡ್ಯೂಸ್ ಮಾಡಿದರೂ ಕೂಡ, ಸೆಲೆಕ್ಟ್ ಕಮಿಟಿಗೆ ಹೋಗಿ ಅವರ ರಿಪೋರ್ಟ್ ಬರಬೇಕಾದರೆ ಮತ್ತೆ ಬಡ್ಜೆಟ್ ಸೆಷನ್ ಬರುತ್ತದೆ. ಮೇ 1959ಕ್ಕೆ ಮುಟ್ಟುತ್ತೀರಿ. ಮೈಸೂರು ಸಂಸ್ಥಾನದ ಚರಿತ್ರೆಯೊಳಗೇ ಇಷ್ಟು ದಿವಸ ಅಸೆಂಬ್ಲಿ ನಡೆದದ್ದು ಈಗಲೇ, ಆಗಲೂಕೂಡ 1959ರ ಜೂನ್‌ವರೆಗೂ ನಡೆಯುತ್ತದೆ. ನಾವು ಬಿಲ್ ಪಾಸ್ ಮಾಡಿದರೂ ಕೂಡ ಚುನಾವಣೆ ನಡೆಸುವುದಕ್ಕಾಗುವುದಿಲ್ಲ. ಆಗ ಏನು ಹೇಳುತ್ತೀರಿ? ವಳೆಗಾಲ ಬಂದಿದೆ, ಚುನಾವಣೆ ನಡೆಸುವುದಕ್ಕಾಗುವುದಿಲ್ಲ ಎಂದು ಹೇಳುತ್ತೀರಿ. ಅಕ್ಟೋಬರ್, ನವಂಬರ್‌ವರೆಗೆ ತಳ್ಳುತ್ತೀರಿ. ಅಷ್ಟು ಹೊತ್ತಿಗೆ ನಾವು 1960ನೆಯ ಮಾರ್ಚ್ ಮುಟ್ಟುತ್ತೇವೆ. ನನಗಂತೂ ಇದರ ಅರ್ಥವೇ ಆಗುವುದಿಲ್ಲ. ಸ್ಥಳೀಯ ಸಂಸ್ಥೆಗಳ ಮಂತ್ರಿಗಳಲ್ಲರ ತಕ್ಕ ಬುದ್ಧಿಚಾತುರ್ಯ, ಅವರಲ್ಲರತಕ್ಕ ಒಂದು ಗುಣದಿಂದ ಇದನ್ನು ಕರತರಾಮಲಕ ಮಾಡಿಕೊಂಡು ಪ್ರಯತ್ನ ಮಾಡಿದರೆ ಇದುವರೆಗಾಗಲೇ ಒಂದು ಬಿಲ್ಲನ್ನು ತರುತ್ತಿದ್ದರು. ಈಗಲಾದರೂ ಇದನ್ನು speed up ಮಾಡಿ ನಮ್ಮ ಜಿಲ್ಲೆಗೆ ಒಂದು ಹೆಸರು ತನ್ನಿ. ನಿಮಗಲ್ಲದಿದ್ದರೂ ಹೋಗಲಿ, ನೀವು ಹುಟ್ಟಿದ ಸ್ಥಳಕ್ಕಾದರೂ ಒಂದು ಹೆಸರುಗಳಿಸಿಕೊಡಿ. ಬಿಲ್ ತೆಗೆದುಕೊಂಡು ಬಂದು ಶೀಘ್ರವಾಗಿ ಪಾಸ್‌ಮಾಡಿಸಿ ಚುನಾವಣೆ ನಡೆಸಿ ಪ್ರಜಾಪ್ರಭುತ್ವವನ್ನು ಉಳಿಸುತ್ತೀರಿ ಎಂದು ತಿಳಿದುಕೊಂಡು, ಈ ಬಿಲ್ಲನ್ನು ಸಂಪೂರ್ಣವಾಗಿ—ಬಹಳ ಮನಸ್ಸು ನೋಯುತ್ತಾ ಇದೆ—withdraw ಮಾಡಿ, ಇದು ಬೇಡಿ ಎಂದು ಹೇಳುತ್ತೇನೆ. ಮತ್ತೆ ಯೂನಿಫಾರಂ ಬಿಲ್ ತಂದು ಚುನಾವಣೆ ನಡೆಸುವುದಕ್ಕೆ ತ್ವರಿತವಾಗಿ ಕಾರ್ಯ

ಕ್ರಮ ಕೈಕೊಳ್ಳುತ್ತೀರಿ ಎಂದು ನಂಬಿ ನನ್ನ ಭಾಷಣ ವನ್ನು ಮುಕ್ತಾಯ ಮಾಡುತ್ತೇನೆ.

Sri B. R. SUNTHANKAR (Belgaum City).—I rise to oppose this Bill with all the force at my command. We are asked to extend the period of the Local Boards in the Bombay-Karnatak area by one year. This is not the first time that the period is sought to be extended. Last year also such an extension was asked for, which was given and now the Government is coming up for an extension of another year. That means that the present local boards in the Bombay area would be in existence continuously for seven years. I think this is a record for any local body in India. Such an extension militates against all the tenets of democracy. We are running a parliamentry democracy and elections are a basis for the working of this system. The original life of the Board was four years, it became five years, six years and it is given a lease of another or the seventh year. The reason given is that uniform legislation is coming up and for that purpose this extension is necessary. The same excuse was put forward last year when the extension was given. My charge against the Government is this: They are afraid to face the elections for local boards in the Bombay area because the ruling party would lose. In my district, Belgaum, the Congress has utterly lost in the last General Elections to the Assembly and they are afraid that the ruling Congress party may again lose horribly in the local board elections. That is why the Government is finding out some excuse or the other to extend the period of the local bodies.

Sir, we are asked to exten l the period again. Last time Government assured that uniform legislation would be brought forward early and for that an extension was sought. The Government have failed to bring such a measure before the House and we do not know when this uniform legislation would be completed. It may take perhaps a year or two, because indecision or a policy of drift seems to be the law with the Government. We are asked to vote here for the failings and lapses of the Government everytime. Again and again the Government has failed to perform its duties and we are expected to approve it. That is very regrettable. Therefore in the name of Democracy I strongly oppose this Bill and request the members of the House not to pass it.

*ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ಇದು ಹತ್ತು ವರ್ಷಗಳಿಂದ ಚರ್ಚೆಯಾಗುತ್ತಿದೆ. ಹೇಳಿದ್ದೇ ಹೇಳುತ್ತಿರಬೇಕು. ಹತ್ತು ವರ್ಷ ಇಪ್ಪತ್ತು ವರ್ಷ ಆಗಿರಬೇಕು. ಹೇಳಿದ್ದೇ ಹೇಳಿನುವುದಕ್ಕೆ ಪ್ರಯತ್ನ ಮಾಡಿದಹಾಗೆ ಕಾಣುತ್ತದೆ. ಪುನಃ ಪುನಃ ಕೇಳಬೇಕು ಎಂದು ಆಶೆಯೇ ಏನೋ ನನಗಂತೂ ಅರ್ಥವಾಗುವುದಿಲ್ಲ. ಆಶೆ ಇಲ್ಲದಿದ್ದರೆ ಪುನಃ ಅಮೆಂಡ್‌ಮೆಂಟ್ ತರುತ್ತಿರಲಿಲ್ಲ. ಹಣಕಾಸಿನ ವಿಷಯ ಬಂದಾಗ ಯೂನಿಫಾರ್ಮಿಟಿ ಬೇಕು, ಹೈದರಾಬಾದಿನಲ್ಲಿ ಎಷ್ಟು ಬರುತ್ತದೋ, ಬೊಂಬಾಯಿನಲ್ಲಿ ಎಷ್ಟು ಬರುತ್ತದೋ, ಹೆಚ್ಚು ಎಲ್ಲ ಇದೆಯೋ ಅದನ್ನು ಸೇರಿಸಿಬಿಟ್ಟು ಒಂದು ಕಾನೂನು ಮಾಡೋಣ ಎಂದು ಹೇಳುತ್ತಾರೆ. ಇನ್ನು ಯಾವುದಾದರೂ ಬಂದಾಗ ಆ ರೀತಿ ಹೇಳುತ್ತಾರೆ. ಆದರೆ ಡಿಸ್ಟ್ರಿಕ್ಟ್ ಬೋರ್ಡಿನ ವಿಷಯ ಬಂದಾಗ ಮಾತ್ರ ಹಾಗೆ ಹೇಳುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡ್ ಎಂದರೆ ಏತಕ್ಕೆ ಹಾಗೆ ಮಾಡುತ್ತಾರೋ ನನಗೆ ಅರ್ಥವಾಗುವುದಿಲ್ಲ. ಏನೂ ಇಲ್ಲದೆ ಇರುವುದನ್ನು ಇಷ್ಟು ದೊಡ್ಡದು ಮಾಡಿಕೊಂಡು ಹೋಗುತ್ತಾರೆ. ನೀವೇ ಹೇಳಿದಿರಿ ಡಿಸ್ಟ್ರಿಕ್ಟ್‌ಬೋರ್ಡಿಗೆ ಚುನಾವಣೆ ಮಾಡುವುದಕ್ಕೆ ಬೇರೆ ತರಹ ಮಾಡುತ್ತೇವೆ ಎಂದು; ಎಷ್ಟೋ ಕಮಿಟಿ ಮಾಡಿದಿರಿ. ಅದನ್ನು ಹೇಳುತ್ತಾ ಹೋದರೆ ವೇಳೆಯಾಗುತ್ತದೆ. ಮೈಸೂರಿನಲ್ಲಿ ಏನು ಮಾಡಿದಿರಿ? ಡಿಸ್ಟ್ರಿಕ್ಟ್ ಬೋರ್ಡನ್ನು ಡೆಪ್ಯುಟಿಕಮೀಷನರ ಕೈಗೆ ಒಪ್ಪಿಸಿದಿರಿ. ಕಮಿಟಿಗಳನ್ನುಮಾಡಿ ಅವುಗಳಿಗೆ ನಾಮಿನೇಷನ್ ಮಾಡಿದ್ದೀರಿ. ಇಷ್ಟೆಲ್ಲಾ ಮಾಡಿದರೂ ಎಂದಿನಂತೆ ಹಾಗೆಯೇ ಡಿಸ್ಟ್ರಿಕ್ಟ್‌ಬೋರ್ಡ್ ಕಂಟಿನ್ಯೂ ಆಗಲಿ ಎಂದು ಹೇಳುವುದರಲ್ಲಿ ಏನೋ ಇದೆ ಎಂದು ಶಂಕೆ ಬರುತ್ತದೆ. ಶಂಕೆ ಬರಬೇಕಾದ ಕಾರಣ ಇದೆ. ಎಲ್ಲಾಕಡೆ ವಜಾ ಮಾಡಿದ್ದಾರೆ. ಇಲ್ಲ ವಜಾಮಾಡಿ ಕಮಿಟಿಗಳಿಗೆ ನಾಮಿನೇಟ್ ಮಾಡಿರುವವರನ್ನು ತೆಗೆದು ಹಾಕಿ ಬಿಟ್ಟು ಈ ಬಿಲ್ಲು ಬರುವತನಕ ಆ ಇಲಾಖೆಯ ರೆಪ್ರೆಸೆಂಟೇಟೀವ್ಸ್ ಇರುವಹಾಗೆ ಮತ್ತು ಆಯಾ ಜಿಲ್ಲೆಯಲ್ಲಿರತಕ್ಕ ಅಸೆಂಬ್ಲಿ ಮೆಂಬರ್ಸ್‌ಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಹಾಕುತ್ತಾರೆಂದು ಹೇಳಿದರೆ, ಹಿಂದೆ ಮಾಡಿದ ನಾಮಿನೇಷನ್ ಹಾಗೆಯೇ ಇದೆ. ಹೊಸದಾಗಿ ಮಾಡುವಾಗ ಈ ಬಿಲ್ಲು ತಂದು ಮಾಡಬೇಕಾದ ಪ್ರಮೇಯ ಇರುವುದಿಲ್ಲ. ಪದೇ ಪದೇ ಎಕ್ಸ್‌ಟೆಂಡ್ ಮಾಡುವುದಕ್ಕಿಂತ ಅದನ್ನು ವಜಾಮಾಡಿ ಅಸೆಂಬ್ಲಿ ಮೆಂಬರ್ ಚುನಾಯಿತರಾದವರು ಇದ್ದರೆ, ಒಂದು ಕಮಿಟಿ ಕಾರ್ಸ್ಟಿಟ್ಯೂಟ್ ಮಾಡಿ ಅವರ ಕೈಯಲ್ಲಿ ಆಡಳಿತ ಕೊಡಿ. ಎಲ್ಲಾಕಡೆಯೂ ಒಂದು ಯೂನಿಫಾರ್ಮಿಟಿ ಇರಲಿ. ಬೆಂಗಳೂರಿನಲ್ಲಿ ಹೇಗೆ ಇದೆಯೋ ಹಾಗೆ ಬೆಳಗಾಮ್ ಬೊಂಬಾಯಿನಲ್ಲೂ ಇರಲಿ. ಒಂದೂರಿನಲ್ಲಿ ಒಂದು ವಿಧ, ಇನ್ನೊಂದು ಊರಿನಲ್ಲಿ ಇನ್ನೊಂದು ವಿಧ ಏತಕ್ಕೆ? ನಿಮ್ಮ ಕೆಲವು ತೊಂದರೆಗಳಿಂದ ಹಾಗೆ ಮಾಡಿಕೊಳ್ಳುತ್ತಿದ್ದೀರಿ. ಹೀಗೆಲ್ಲಾ ಮಾಡಿದರೆ ಕೊನೆಗೆ ಒರಿನ್ಸ್ ಸರ್ಕಾರದ ಗತಿ ಆಗುತ್ತದೋ ಏನೋ ಗೊತ್ತಿಲ್ಲ. ಆದ್ದರಿಂದ ಅದಷ್ಟು ಜಾಗ್ರತೆ ಚುನಾವಣೆಗಳನ್ನು ಮಾಡಿ. ಇನ್ನೂ ಎಕ್ಸ್‌ಟೆನ್ಶ್

ಎ ಬಿ. ಕೆ. ಟ್ಟರಾಮಯ್ಯ)

ಷನ್ ಕೊಡುವುದಕ್ಕೆ ಹೋಗಬೇಡಿ. ಇನ್ನು ಹೆಚ್ಚಿಗೆ ಹೇಳುವುದಿಲ್ಲ. ಆ ಬಿಲ್ಲು ನರಿಯಿಲ್ಲ. ಇದನ್ನು ವಿರೋಧಿಸುತ್ತೇನೆ. ಡಿಸ್ಟ್ರಿಕ್ಟ್‌ಬೋರ್ಡ್ ಎಲೆಕ್ಷನ್ ಆಗುವವರೆಗೆ ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ಕಮಿಟಿಯೊಂದನ್ನು ಇಲ್ಲಿ ಇದ್ದಹಾಗೆ ಮಾಡಿ; ಆಗ ನಮಗೆ ನಂಬಿಕೆ ಬರುತ್ತದೆ. ಜಾಗ್ರತೆ ಚುನಾವಣೆ ಮಾಡಿ.

*ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಈಗ ಹತ್ತು ವರ್ಷಗಳಿಂದ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಗಳನ್ನು ಮಾಡಿ ಜನಗಳಿಗೆ ಬೇಕಾದಂತೆ ಅನುಕೂಲಗಳನ್ನು ಒದಗಿಸಿ ಜನಗಳ ಕಷ್ಟಸುಖಗಳನ್ನು ನೋಡುತ್ತಾರೆ ಎಂದು ತಿಳಿದುಕೊಂಡಿದ್ದೆವು. ಅವಕ್ಕೆ ಜೀವದಾನ ಪದ್ಧತಿ ನಡೆಸಿಕೊಂಡು ಹೋಗುತ್ತಿದ್ದಾರೆ. ಪ್ರತಿನಿಧಿಗಳನ್ನು ಎಲೆಕ್ಟ್‌ಮಾಡಿ ಅಲ್ಪಸ್ವಲ್ಪ ಕೆಲಸ ಮಾಡಿಕೊಂಡು ಹೋಗಿ ಎಂದು ಪದೇ ಪದೇ ಸರ್ಕಾರದವರ ಗಮನಕ್ಕೆ ತರುತ್ತಿದ್ದರೂ ಅದು ಪ್ರಯೋಜನವಾಗಿಲ್ಲ. ಮುಖ್ಯವಾಗಿ ಬೆಂಗಳೂರಿನಲ್ಲಿ ಕುಳಿತುಕೊಂಡು ಅಕ್ಕಪಕ್ಕದ ರಸ್ತೆಯಲ್ಲಿ ಇರುವುದನ್ನು ನೋಡಿದ್ದು ಇಂಟೀರಿಯರ್ ತಾಲ್ಲೂಕಿನಲ್ಲಿ ಏನು ನಡೆಯುತ್ತದೆ ಎನ್ನುವುದು ಗೊತ್ತಿಲ್ಲದೆ ಅನುಭವ ಇಲ್ಲದೆ ಇರುವವರನ್ನು ದಾಕ್ಷಿಣ್ಯಕ್ಕೆ ಒಳಗಾಗಿ ನಾಮಿನೇಷನ್ ಮಾಡುತ್ತಾರೆ. ಅಂಥವರೂ ಡಿಸ್ಟ್ರಿಕ್ಟ್ ಬೋರ್ಡ್ ಆಡಳಿತದಲ್ಲಿ ಕುಳಿತುಕೊಂಡು ತೀರ್ಮಾನ ಮಾಡಬೇಕಾದ ನನ್ನಿವೇಶ ಬರುತ್ತದೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ನಾಮಿನೇಷನ್ ಬೆಳಗಾಮ್ ಡಿವಿಜನ್‌ನಲ್ಲಿ ಇಲ್ಲ. ಅದು ಎಲೆಕ್ಟೆಡ್ ಬಾಡಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾಡಿರುವ ಕೆಲಸ ಹಾಳಾಗಿಹೋಗುತ್ತಿದೆ. ಡಿಸ್ಟ್ರಿಕ್ಟ್‌ಬೋರ್ಡ್ ಬೇಡ, ನಾವು ಹೇಳುವುದು ಬೇಡ, ಇದರ ಜವಾಬ್ದಾರಿಯನ್ನು ತಾಲ್ಲೂಕು ಅಮಲ್ದಾರರಿಗೆ ಕೊಟ್ಟುಬಿಟ್ಟು ಏನೇನು ಕೆಲಸ ಮಾಡಬೇಕೋ ಅದನ್ನುಮಾಡಿ. ಇಲ್ಲದಿದ್ದರೆ ನ್ಯಾಯವಾದ ಪ್ರತಿನಿಧಿ ಇದ್ದು ಏನು ಕೆಲಸ ಮಾಡಬೇಕೋ ಅದನ್ನುಮಾಡಿ. ಆಗ ಒಳ್ಳೆಯ ಕೆಲಸ ಆಗಬಹುದು. ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ ಬಂದಾಗ ಎದ್ದುನಿಂತು ವಿರೋಧಮಾಡಬೇಕು ಎಂದೇನೂ ಇಲ್ಲ. 10-15 ವರ್ಷಗಳಿಂದ ಅನೇಕಕಡೆ ಮಾಡಿದ ಕೆಲಸ ಹಾಳಾಗಿಹೋಗಿದೆ. ಆದ್ದರಿಂದ ಸೀವದಾನ ಪದ್ಧತಿ ಬಿಟ್ಟುಬಿಟ್ಟು ಇನ್ನುಮುಂದೆಯಾದರೂಕೂಡ ಜಾಗ್ರತೆಯಾಗಿ ನರಿಯಾದ ಬಿಲ್ಲನ್ನು ತಂದು ಪೂರ್ಣವಾಗಿ ಎಲೆಕ್ಷನ್‌ಮಾಡಿ ಪ್ರಜಾಪ್ರಭುತ್ವ ನೆಲೆಯಾಗುವುದಕ್ಕೆ ಅವಕಾಶಮಾಡುತ್ತಾರೆಂದು ಹೇಳಿ ಈ ಬಿಲ್ಲನ್ನು ವಿರೋಧಿಸುತ್ತೇನೆ.

*ಶ್ರೀ ಆರ್. ಚೆನ್ನಿಗರಾಮಯ್ಯ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಅಮೆಂಡ್‌ಮೆಂಟಿನ ಮೇಲೆ ಭಾಷಣಮಾಡುತ್ತಾ ಇದುವರೆಗೂ ಹೊಸ ಮೈಸೂರು ಆದಮೇಲೂ ಹಳೆಯ ಮೈಸೂರಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗಳು ಆಗಿಲ್ಲವಲ್ಲ ಎನ್ನುತಕ್ಕ ವ್ಯಥೆಯನ್ನು ವ್ಯಕ್ತಪಡಿಸಿದ್ದಾರೆ. ನಾನಾದರೂ ಈ ರೀತಿ ಪದೇಪದೇ ಸಭೆಯ ಮುಂದೆಬಂದು ಈ ಜಿಲ್ಲಾ ಬೋರ್ಡುಗಳ ಜೀವಾವಧಿಯನ್ನು ಕೇಳತಕ್ಕದ್ದು ಸಮಾಧಾನಕರವಾದ ವಿಷಯ ಎಂದು ತಿಳಿದುಕೊಂಡಿಲ್ಲ. ಮಾನ್ಯ ಸದಸ್ಯರು ಏನು ಒಂದು ರೀತಿಯಲ್ಲಿ ವ್ಯಥೆಯನ್ನು ವ್ಯಕ್ತಪಡಿಸಿ ಹೇಳಿದರೋ, ಅಷ್ಟೇ ವ್ಯಥೆ ನಮಗೂ ಸಹ ಆಗುತ್ತದೆ ಎನ್ನುವುದನ್ನು ನಾನು ಖಂಡಿತ ಹೇಳಬೇಕಾಗುತ್ತದೆ. ಉದ್ದೇಶಪೂರ್ವಕವಾಗಿ ಸರ್ಕಾರದ ಜವಾಬ್ದಾರಿಯನ್ನು ವಹಿಸಿಕೊಂಡಿರತಕ್ಕವರು ಚುನಾವಣೆಯನ್ನು ಎದುರಿನುವುದಕ್ಕೆ ಶಕ್ತಿ ಇಲ್ಲದೆ, ಈ ರೀತಿ ಮಾಡುತ್ತಿದ್ದಾರೆ ಎಂದು ಶ್ರೀ ಸುಂತಂಕರ್‌ರವರು ಹೇಳಿದರು. ಆ ತರಹ ಅಧೈರ್ಯದಿಂದ ಈ ಬೋರ್ಡನ್ನು ಮುಂದುವರಿನುತ್ತಾ ಇಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಈಗತಾನೆ ಮುಕ್ಕಣ್ಣಪ್ಪನವರು ಚೆನ್ನಾಗಿ ಈ ವಿಚಾರದಲ್ಲಿ ಭಾಷಣಮಾಡಿದರು. ಅವರಿಗೆ ವಾಕ್‌ಝರಿ ಚೆನ್ನಾಗಿದೆ. ಅವರು ನಮ್ಮ ಜಿಲ್ಲೆಯವರು ಆದ್ದರಿಂದ ನನಗೂ ಹೆಮ್ಮೆ. ಅವರು ಕೇಳಿದರು ''ನಮ್ಮ ಜಿಲ್ಲೆಯವರೇ ಮುನಿಸಿಪಾಲಿಟಿ ಆಕ್ಟ್ ಮಾಡಿದವರು, ಡಿಸ್ಟ್ರಿಕ್ಟ್‌ಬೋರ್ಡ್ ಆಕ್ಟ್ ಮಾಡಿದ್ದಲ್ಲವಲ್ಲ ಎಂದು ವ್ಯಥೆಯಾಗುತ್ತದೆ'' ಎಂದು ಅದನ್ನು ಮಾಡಿ ನಮ್ಮ ಜಿಲ್ಲೆಗೆ ಗೌರವ ತರುತ್ತಾರೆ ಎಂದು ಅವರಿಗೆ ಜ್ಞಾಪಿಸಬೇಕಾಗುತ್ತದೆ. ಹಿಂದೆ ಮುನಿಸಿಪಾಲಿಟಿ ಆಕ್ಟ್ ಮಾಡಿದಾಗ್ಗೆ ಒಂದು ಕಮಿಟಿಯನ್ನು ಮಾಡಿದ್ದೆವು. ಆ ಕಮಿಟಿಗೆ ಶ್ರೀ ಭೀಮಪ್ಪನಾಯಕರು ಚೇರ್ಮನರು ಆಗಿದ್ದರು. ಕಮಿಟಿ ರಿಪೋರ್ಟ್ ಬಂದಮೇಲೆ ಬಿಲ್ಲು ತಯಾರಾಗಿ ಆಕ್ಟ್‌ಪಾಸ್‌ಆಯಿತು. ಅದರಮೇಲೆ ಎಲೆಕ್ಷನ್ ನಡೆಯಿತು. ಅದೇರೀತಿಯಲ್ಲಿ ಇನ್ನೊಂದು ಕಮಿಟಿ ಮಾಡಿದೆವು. ಶ್ರೀ ವೆಂಕಟಪ್ಪನವರು ಆದಕ್ಕೆ ಅಧ್ಯಕ್ಷರಾಗಿದ್ದರು. ಅದೇ ರೀತಿ ರಿಪೋರ್ಟ್ ಬಂತು. ಬಿಲ್‌ಮಾಡಿ ಆಕ್ಟ್ ಪಾಸಾಯಿತು. ಹಳೆಯ ಮೈಸೂರಿನ ಆಕ್ಟ್ ಪ್ರಕಾರ ಎಲೆಕ್ಷನ್ ನಡೆಯಬೇಕಾಗಿತ್ತು. ಅದರಲ್ಲಿ ಸರ್ಕಾರದ ಜವಾಬ್ದಾರಿ ಇಲ್ಲ. ಎಲೆಕ್ಷನ್ ನಡೆಯುವ ಸಂದರ್ಭದಲ್ಲಿ ಜನರಲ್ ಎಲೆಕ್ಷನ್ ನಡೆಯಿತು. ಹೊಸ ಸರ್ಕಾರದವರು ಬಂದಮೇಲೆ ಅನೇಕ ಮಾರ್ಪಾಡುಗಳನ್ನು ಹಿಂದಿರತಕ್ಕ ಆಕ್ಟಿನಲ್ಲಿ ನಜೆಸ್ಟ್‌ಮಾಡಿದರು. ಅದರಮೇಲೆ ಎಲೆಕ್ಷನ್ ನಡೆಸುವುದಕ್ಕೆ ಆಗಿನ ಸರ್ಕಾರಕ್ಕೆ ಅವಕಾಶವಾಗಲಿಲ್ಲ. ಆದ್ದರಿಂದ ವಿಳಂಬವಾಗಿ ಈ ರೀತಿಆಯಿತು. ಮತ್ತೆ ಇಂಟಗ್ರೇಷನ್‌ಆಯಿತು. ಈಗ ಹೊಸ ಐದು ಪ್ರಾಂತಗಳು ಸೇರಿ 'ಐದು ಕಾನೂನುಗಳು ಜಾರಿಯಲ್ಲಿವೆ. ಶ್ರೀ ಮುಕ್ಕಣ್ಣಪ್ಪನವರು 'ಐದು ತಿಂಗಳ ಅವಧಿಯಲ್ಲಿ ಜನರಲ್ ಎಲೆಕ್ಷನ್ ಮಾಡಿಲ್ಲವೇ? ಇದನ್ನು ಏತಕ್ಕೆ ಮಾಡಲು ಆಗಿಲ್ಲ' ಎಂದು ಕೇಳಿದರು.

ಹೇಳುವುದು ಬಹಳ ಸುಲಭ. ಮಾಡುವುದು ಕಷ್ಟ. ನಾವೂಕೂಡ ಇದನ್ನು ಆದಷ್ಟು ಜಾಗ್ರತೆ ಮಾಡೋಣ ಎಂದು ಒಂದು ಸಮಿತಿ ನೇಮಕಮಾಡಿದ್ದೆವು. ಆ ವಿಚಾರ ತಮಗೆಲ್ಲರಿಗೂ ತಿಳಿದಿರತಕ್ಕದ್ದೇಆಗಿದೆ. ಆ ಬಗ್ಗೆ ಸಮಿತಿಯವರ ರಿಪೋರ್ಟ್‌ಬಂದು, ಆ ಬಗ್ಗೆ ನಾವೂಕೂಡ ಒಂದು ಡ್ರಾಫ್ಟ್ ಬಿಲ್ಲನ್ನು ತಯಾರಿಸಿದ್ದೆವು. ಆದರೆ ಅಷ್ಟರೊಳಗೇ ರಾಜ್ಯಗಳ ಪುನರ್ವಿಂಗಡಣೆ ಪ್ರಶ್ನೆ ಬಂತು. ಆಗ ಐದು ಹೊಸ ಪ್ರದೇಶಗಳು ಐದು ಬಗೆಯ ಕಾನೂನುಗಳಿದ್ದಂಥ ಪ್ರದೇಶಗಳು ಬಂದು ಸೇರಿದವು. ಹಾಗೆ ಏತನ್ಮಧ್ಯೆ ನಾನಾತರಹೆಯ ಜಟಿಲವಾದಂಥ ಸಮಸ್ಯೆಗಳು ತಲೆದೋರಿದವು. ಆಗ ಮತ್ತೆ ಈ ಐದು ಹೊಸ ಪ್ರದೇಶಗಳಿಗೂ ಒಂದು ಯೂನಿಫಾರಂ ಕಾನೂನನ್ನು ರಚಿಸಲು ನಾನಾ ವಿಚಾರಗಳನ್ನು ಪರಿಶೀಲನೆಮಾಡಬೇಕಾಗಿ ಬಂತು. ಆದುದರಿಂದ ಇದಕ್ಕೆ ನಾವು ತೆಗೆದುಕೊಂಡ ಕಾಲಾವಕಾಶ ಸಾಕಾಗಲಲ್ಲ. ಇದರಲ್ಲರತಕ್ಕ ಮುಖ್ಯಾಂಶವೆಲ್ಲ ಇಷ್ಟೆ. ನಾವು ಎಷ್ಟೇ ಸಾಹಸಮಾಡಿದಾಗ್ಗೂ ಅದು ಸಾಧ್ಯವಾಗಲಲ್ಲ. ಇಷ್ಟು ವಿಚಾರವಲ್ಲದೆ ಮತ್ತೇನೂಇಲ್ಲ. ಈಗಲಾದರೂ ನಾವು ಈ ಬಗ್ಗೆ ಆದಷ್ಟು ತ್ವರಿತವಾಗಿ ಇದನ್ನು ಮಾಡಲೇಬೇಕೆಂದು ಸರ್ವಪ್ರಯತ್ನಗಳನ್ನೂ ಮಾಡುತ್ತೇವೆ. ಒಂದು ಸಮಿತಿಯನ್ನು ಮತ್ತೆ ಈ

ವಿಚಾರದಲ್ಲಿ ನೇಮಕಮಾಡಿದರೆ ಪುನಃ ಕಾಲವಿಳಂಬ ವಾದೀತಲ್ಲ ಎಂದು ಈ ಖಾತೆಯ ಸೆಕ್ರೆಟರಿಯವರನ್ನೇ ಇಟ್ಟುಕೊಂಡು ಆದಷ್ಟು ಜಾಗ್ರತೆಯಾಗಿ ಈ ಐದು ಹೊಸ ಪ್ರದೇಶಗಳಿಗೂ ಅನ್ವಯಿಸುವಂತೆ ಒಂದು ಯೂನಿಫಾರಂ ಆದ ಕಾನೂನನ್ನು ತಯಾರಿಸಲು ಸರ್ವ ಪ್ರಯತ್ನಗಳನ್ನೂ ಮಾಡಿದ್ದೇವೆ. ಈ ಬಗ್ಗೆ ಈಗಾಗಲೇ ಒಂದು ಬಿಲ್ಲನ್ನು ಡ್ರಾಫ್ಟ್ ಮಾಡಿ ಅದನ್ನು ಈ ಸಭೆಯ ಮುಂದೆ ತರಬೇಕೆಂದು ಮಾಡಿದ್ದೆವು. ಆದರೆ ಕೆಲವು ಕಾರಣಾಂತರಗಳಿಂದ ಅದು ಸಾಧ್ಯವಾಗಲಲ್ಲ. ಮುಂದೆ ಈ ಬಿಲ್ಲು ಈ ಸಭೆಯ ಮುಂದೆ ಆದಷ್ಟು ತ್ವರಿತವಾಗಿ ಬರುವುದರಲ್ಲಿದೆ. ಅದನ್ನು ಶಾಸನಕಡಿ ತಕ್ಕೇರಿಸುವಂಥ ಜವಾಬ್ದಾರಿ ತಮ್ಮೆಲ್ಲರ ಕೈಲಿದೆ. ಇಷ್ಟು ಕಾರ್ಯಮಾಡಲು ಒಂದು ವರ್ಷ ಕಾಲ ಬೇಕೇ ಎಂದು ಕೆಲವರು ಮಾನ್ಯ ಸದಸ್ಯರು ಪ್ರಶ್ನೆಮಾಡಿದ್ದಾರೆ. ಈ ಕಾರ್ಯಗಳನ್ನು ಅಷ್ಟು ತರಾತುರಿಯಿಂದ ಆತುರದಲ್ಲಮಾಡಲು ಸಾಧ್ಯವಿಲ್ಲ. ನಾನಾ ಸಮಸ್ಯೆಗಳನ್ನು ಬಿಡಿಸಬೇಕಾಗಿದೆ. ಐದು ರೀತಿ ಕಾನೂನಿರತಕ್ಕ ಐದು ಹೊಸ ಪ್ರದೇಶಗಳು ಬಂದು ಸೇರಿರುವುದರಿಂದ ನಾನಾ ವಿಚಾರಗಳನ್ನು ಪರಿಶೀಲನೆಮಾಡಬೇಕಾಗಿದೆ. ಅದಕ್ಕಾಗಿ ಮತ್ತೊಂದು ವರ್ಷದ ಅವಧಿ ಬೇಕೇಬೇಕು. ಇನ್ನು ಒಂದು ವರ್ಷದೊಳಗಾಗಿ ಆದರೂ ಈ ಕಾರ್ಯವನ್ನು ನೆರವೇರಿಸಿ ಚುನಾವಣೆಗಳನ್ನು ನಡೆಸುವುದಾದರೆ ಅದೂಕೂಡ ಒಂದು ದೊಡ್ಡ ಸಾಹಸಮಾಡಿದಂತೆಯೇ ಆಗುತ್ತದೆ. ಈಗ ನಮಗೆ ಸೇರಿರತಕ್ಕ ಬೊಂಬಾಯಿ ಕರ್ಣಾಟಕಕ್ಕೆ ಸೇರಿರುವ ನಾಲ್ಕು ಜಿಲ್ಲೆಗಳಲ್ಲಿ ಜಿಲ್ಲಾಬೋರ್ಡ್ ನಮಿತಿಗಳ ಅವಧಿ ಮುಂದಿನ 31-5-58ಕ್ಕೆ ಪೂರ್ತಿಯಾಗುತ್ತದೆ. ಆದರೆ ಶ್ರೀ ಪುಟ್ಟರಾಮಯ್ಯನವರು ಈಗ ಹಳೆಯ ಮೈಸೂರು ಏರಿಯಾದಲ್ಲಿದ್ದ ಜಿಲ್ಲಾಬೋರ್ಡುಗಳನ್ನು ವಜಾಮಾಡಿ ಇಲ್ಲಿಯಾವ ರೀತಿ ಅಡ್ಮಿನಿಸ್ಟ್ರೇಷನ್ ಬಾಡಿಯನ್ನು ನಾಮಿನೇಟ್ ಮಾಡಿದ್ದೀರೋ ಹಾಗೇಯೆ ಅಲ್ಲಿಯೂ ಮಾಡಿ ಎಂಬುದಾಗಿ ಹೇಳಿದರು. ಆದರೆ ಆ ರೀತಿ ಮಾಡತಕ್ಕದ್ದು ನ್ಯಾಯವಾದುದಲ್ಲವೆಂದು ನಾನು ಅವರಿಗೆ ತಿಳಿಸಬೇಕಾಗಿದೆ. ಆ ಜಿಲ್ಲೆಗಳಲ್ಲಿ ಈ ದಿವಸ ಕೆಲಸ ನಡೆಸುತ್ತಿರುವ ಬಾಡಿಗಳೆಲ್ಲ ನ್ಯಾಯವಾಗಿ ಚುನಾವಣೆಯಾಗಿ ಬಂದಿರತಕ್ಕಂಥ ಬಾಡಿಗಳಾಗಿವೆ. ಹಿಂದಿದ್ದ ಬೊಂಬಾಯಿ ಜಿಲ್ಲಾಬೋರ್ಡುಗಳ ಆಕ್ಟ್ ಪ್ರಕಾರ ಈ ಚುನಾವಣೆಗಳು ನಡೆಯುವುದಕ್ಕೆ ಇನ್ನೂ ಒಂದುತಿಂಗಳ ಅವಧಿ ಇದೆ ಎನ್ನುವಾಗಲೇ ಆ ಬಾಡಿಗಳನ್ನೆಲ್ಲ ರದ್ದುಮಾಡಿ, ಆ ಅಧಿಕಾರವನ್ನು ಜಿಲ್ಲಾಧಿಕಾರಿಗಳ ಕಡೆಗೆ ವಹಿಸಿ, ಚುನಾವಣೆಗಳು ಮುಗಿದ ನಂತರ ಆ ಅಧಿಕಾರವನ್ನು ಅವುಗಳಿಗೆ ವಹಿಸಬೇಕೆಂಬುದಾಗಿತ್ತು. ಆ ವಿಚಾರಗಳನ್ನೆಲ್ಲ ಈಗ ನಾವು ಮಾರ್ಪಾಡುಮಾಡದೆ ಚುನಾವಣೆಗಳನ್ನು ನಡೆಸುವುದ ಕ್ಕಾಗುವುದಿಲ್ಲ. ಈಗ ನಾವು ಹೊಸ ಮೈಸೂರು ಪ್ರದೇಶಕ್ಕೆಲ್ಲ ಅನ್ವಯಿಸುವಂತೆ ಒಂದು ಕಾನೂನನ್ನು ಜಾರಿಗೆತರಬೇಕಾಗಿದೆ. ಆದರೆ ಅಲ್ಲಿಯವರೆಗೂ ಈಗ ಆ ನಾಲ್ಕು ಜಿಲ್ಲೆಗಳಲ್ಲಿರತಕ್ಕ ಬಾಡಿಗಳವರು ಚುನಾಯಿತ ಬಾಡಿಗಳಾಗಿ ಕೆಲಸಕಾರ್ಯಗಳನ್ನು ಚೆನ್ನಾಗಿ ನಡೆಸಿಕೊಂಡುಬರುತ್ತಿವೆ. ಈಗ ಒಂದು ಹೊಸ ಆಕ್ಟನ್ನು ಎಲ್ಲ ಪ್ರದೇಶಗಳಿಗೂ ಅನ್ವಯಿಸುವಂತೆ ಜಾರಿಗೆತಾರದೆ ಅಲ್ಲಿ ನಾವು ಈ ದಿವಸ ಹೊಸದಾಗಿ ಚುನಾವಣೆಗಳನ್ನು ನಡೆಸುವುದಕ್ಕಾಗುವುದಿಲ್ಲ. ಆ ರೀತಿ ಒಂದೊಂದು ಕಡೆ ಒಂದೊಂದು ರೀತಿ ಮಾಡುವುದು ಅಷ್ಟು ಸೂಕ್ತವಾದುದಲ್ಲವೆಂದು ಸರ್ಕಾರದ ವರೂ ಭಾವಿಸಿದ್ದಾರೆ. ಸದಸ್ಯರೆಲ್ಲರ ಅಭಿಪ್ರಾಯವೂ ಕೂಡ ಹಾಗೆಯೇ ಇದೆ. ಹಿಂದಿನ ಬೊಂಬಾಯಿ ಆಕ್ಟ್ ಪ್ರಕಾರ ಆ ಜಿಲ್ಲಾಬೋರ್ಡುಗಳ ಅವಧಿ ನಾಲ್ಕು ವರ್ಷಗಳು ಮಾತ್ರ ಇತ್ತು. ಅನಿವಾರ್ಯ ಸಂದರ್ಭದಲ್ಲಿ ಆ ಅವಧಿಯನ್ನು ಒಂದು ವರ್ಷಕಾಲ ಮುಂದುವರಿಸಲು ಆ ಕಾನೂನಿನಲ್ಲಿ ಅವಕಾಶವಿತ್ತು. ಅಲ್ಲಿಗೆ ಆ ಆಕ್ಟ್‌ಪ್ರಕಾರ ಐದು ವರ್ಷ ಆ ಬಾಡಿಗಳು ಜೀವಂತವಾಗಿರಲು ಒಂದು ಅವಕಾಶವಿತ್ತು. ಆದರೆ ನಾವೂಕೂಡ ಆ ಒಂದು ವರ್ಷದ ಅವಧಿಯಲ್ಲೇ ಈ ಕಾರ್ಯವನ್ನೆಲ್ಲ ಮುಗಿಸೋಣ ಎಂದಿದ್ದೆವು. ಅದು ಸಾಧ್ಯವಾಗಲಲ್ಲ. ಮಧ್ಯೆ ಅನೇಕ ಕಾಂಪ್ಲಿಕೇಟೆಡ್ ಸಮಸ್ಯೆಗಳು ಉದ್ಭವಿಸಿದವು. ಅದಕ್ಕಾಗಿ ನಾವು ಈಗ ಆ ಜಿಲ್ಲಾಬೋರ್ಡುಗಳ ಅವಧಿಯನ್ನು ಮತ್ತೊಂದು ವರ್ಷಕ್ಕೆ ಹೆಚ್ಚಿಸಬೇಕೆಂದು ಈ ಒಂದು ತಿದ್ದುಪಡಿಯನ್ನು ತಮ್ಮ ಮುಂದೆ ತಂದಿದ್ದೇವೆ. ಆದರೆ ಶ್ರೀ ಶ್ರೀನಿವಾಸಶೆಟ್ಟರವರು ಈ ಹಿಂದೆ ಈ ಬಗ್ಗೆ ಅಜೆಂಡಾದಲ್ಲಿ ಬಿಲ್ಲನ್ನು ಸೇರಿಸಲಾಗಿತ್ತು, ಇತ್ತೀಚೆಗೆ ಅದನ್ನು ಕೈಬಿಡಲಾಗಿದೆಎಂದು ತಿಳಿಸಿದರು. ಹೌದು. ಆ ರೀತಿ ಅಜೆಂಡಾದಲ್ಲಿ ಒಂದು ದಿವಸ ಸೇರಿಸಲಾಗಿದ್ದಿತು. ಆದರೆ ಆ ಬಗ್ಗೆ ಪ್ರೆಸಿಡೆಂಟರಿಂದ ಅನುಮತಿ ಇತ್ಯಾದಿಗಳನ್ನು ಪಡೆಯಬೇಕಾಗಿದ್ದುದರಿಂದ ಅದನ್ನು ಹಿಂದಕ್ಕೆ ಹಾಕಲಾಯಿತು. ಆದರೆ ನಮ್ಮ ಉದ್ದೇಶಕೂಡ ಆ ಬಿಲ್ಲನ್ನು ಈ ಅಧಿವೇಶನದಲ್ಲೇ ಈ ಸಭೆಯ ಮುಂದೆ ತರಬೇಕೆಂಬುದಾಗಿತ್ತು. ಅದು ಸಾಧ್ಯವಾಗಲಲ್ಲ. ಮುಂದಿನ ಡಿಶಂಬರ್ ತಿಂಗಳೊಳಗಾಗಿ ಇದನ್ನು ಈ ಸಭೆಯ ಮುಂದೆತಂದು ಪಾಸ್‌ಮಾಡಿಸಲು ಸಾಧ್ಯವಾಗಬಹುದೆಂಬ ಭರವಸೆ ಇದೆ. ಮುಂದೆ ಯಾವಾಗ ಈ ಸೆಷನ್ ಸೇರುತ್ತದೋ ಆಗ ಇದನ್ನು ಇಲ್ಲಿ ತಂದು ಇದಕ್ಕೆ ತಮ್ಮೆಲ್ಲರ ಒಪ್ಪಿಗೆಯನ್ನೂ ಪಡೆಯಲಾಗುವುದು. ಆಗ ತಾವೆಲ್ಲರೂ ಆ ಮನೂದೆಗೆ ತಮ್ಮ ಒಪ್ಪಿಗೆ ನೀಡುತ್ತೀರೆಂಬ ಭರವಸೆ ನಮಗಿದೆ. ಆ ನಂತರ ಪಂಚಾಯಿತಿಗಳ ಚುನಾವಣೆಗಳನ್ನೆಲ್ಲಾ ನಡೆಸಲು ಅನುಕೂಲವಾಗುವುದು. ಆರೀತಿ ಅನುಕೂಲವನ್ನು ನಾವು ಮುಂದಿನ ವರ್ಷದ ಮಾರ್ಚ್–ಏಪ್ರಿಲ್ ತಿಂಗಳೊಳಗಾಗಿ ಕಲ್ಪಿಸಲು ಸಾಧ್ಯವಾಗಬಹುದೆಂದು ಅಭಿಸುತ್ತಿದ್ದೇವೆ. ಈ ಕಾರ್ಯ ಅವೇಳೆಗಾದರೂ ಸುಲಲಿತವಾಗಿ ನೆರವೇರಿದರೆ ನಾವು ಅದನ್ನು ಈಗಲೇ ಮಾಡಿದಷ್ಟು ಸಾಹಸವಾಗುತ್ತದೆ. ಆದುದರಿಂದ ಈಗ ಸಭೆಯ ಮುಂದೆ ಮಂಡಿಸಿರತಕ್ಕ ತಿದ್ದುಪಡಿ ಮನೂದೆಗೆ ತಾವೆಲ್ಲರೂ, ನಾನೀಗ ಕೊಟ್ಟಿರತಕ್ಕ ಭರವಸೆಯಮೇರೆಗೆ, ತಮ್ಮ ಅಂಗೀಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That the Bombay Local Boards (Mysore Amendment) Bill, 1958, as passed by the Legislative Council, be taken into consideration."

The motion was adopted.

Mr. SPEAKER.—The Clauses of the Bill will now be put to vote. Clauses 1, 2 and 3. The question is:

"That Clauses 1, 2 and 3 stand part of the Bill."

The motion was adopted.

Clauses 1, 2 and 3 were added to the Bill.

Mr. SPEAKER.—Title and Preamble: The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri R. CHENNIGARAMAIAH.—I move :

"That the Bombay Local Boards (Mysore Amendment) Bill, 1958, as passed by the Legislative Council, be passed."

Mr. SPEAKER.—The question is :

"That the Bombay Local Boards (Mysore Amendment) Bill, 1958, as passed by the Legislative Council, be passed."

The motion was adopted.

Mr. SPEAKER.—As the business of the House is over, the House will now rise and meet to-morrow at 1 P.M.

The House adjourned at Thirty-eight Minutes past Five of the Clock to meet again at One of the Clock on Tuesday, the 29th April 1958.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ವ್ಯಾಪ್ತಿ ಕ್ರಮಾಂಕ Accession No. 4776
ದಿನಾಂಕ Date.....

WD 1020—GPB—900—20-10-1958